ಅ) ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದೂಡಲು ಇರುರ ಕಾರಣಗಳೇನು?

ಆ) ಪ್ರಬಲವಾದ ಕಾರಣಗಳು ಇಲ್ಲದಿದ್ದಲ್ಲಿ ಸರ್ಕಾರ ಸರಿಯಾದ ಸಮಯದಲ್ಲಿ ಸಹಕಾರ ಸಂಘಗಳ ಚುನಾವಣೆಯನ್ನು ನಡೆಸಲು ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಮಂತ್ರಿಗಳು):

ಅ) ವಾರ್ಷಿಕ ಮಹಾಸಭೆ ಹಾಗೂ ಚುನಾವಣೆಗಳಿಗೆ ಉಚ್ಚ ನ್ಯಾಯಾಲಯದ ಕಡೆ ಆಜ್ಞೆಯಿಂದ ಹಲವಾರು ಸಹಕಾರ ಸಂಘಗಳು ವಾರ್ಷಿಕ ಮಹಾ ಸಭೆ ಹಾಗೂ ಚುನಾವಣೆಗಳನ್ನು ಮಾಡಲಿಲ್ಲ. ಈಗ ತಡೆ ಆಜ್ಞೆ ವಜಾ ಆಗಿದೆ. ಆದುದರಿಂದ ವಾರ್ಷಿಕ ಮಹಾ ಸಭೆ ಹಾಗೂ ಚುನಾವಣೆಗಳನ್ನು ನಡೆಸಲು ದಿನಾಂಕಗಳನ್ನು ಪುನರ್ ನಿಯಂತ್ರಿಸಬೇಕಾಗಿದೆ.

ಆ) ಉದ್ಭವಿಸುವುದಿಲ್ಲ.

ರಾಜ್ಯದ ಪಶ್ಚಿಮ ಘಟ್ಟಗಳ ಅಭಿವೃದ್ಧಿಯ ಬಗ್ಗೆ.

1379 - ಶ್ರೀ ವಿಜಯ ಕುಮಾರ ಶೆಟ್ಟಿ (ಸೂರತ್ಕಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಎಷ್ಟು ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ?

ಆ) ಮೇಲ್ಕಂಡ ಯೋಜನೆಗೆ ಕೇಂದ್ರ ಸರ್ಕಾರದಿಂದ ಬರಬೇಕಾದ ಹಣ ಕಡಿಮೆಯಾಗಿದಿಯೇ?

ಇ) ಮೇಲ್ಕಂಡ ಯೋಜನೆಯಡಿ ಈವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಆಯ್ದ 40 ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ಆ) ಇಲ್ಲ.

ಇ) 1984-85 ರಿಂದ 1990-91 (28-2-91) ರವರೆಗೆ ರೂ. 599.048 ಲಕ್ಷಗಳಷ್ಟು ಖರ್ಚು ಮಾಡಲಾಗಿದೆ.

ರಾಜ್ಯದಲ್ಲಿರುವ ಚಿಕಿತ್ಸಾಲಯಗಳಿಗೆ ಔಷಧಿಗಳ ಸರಬರಾಜು.

1384 - ಶ್ರೀ ಕೆ.ವಿ. ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಗ್ರಾಮೀಣಾಭಿವದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶುಚಿಕಿತ್ಸಾಲಯಗಳಿಗೆ ಜಾನುವಾರುಗಳ ಚಿಕಿತ್ಸೆಗಾಗಿ ಔಷಧಿಗಳ ಸರಬರಾಜಿಗೆ ಪ್ರಸಕ್ತ ಸಾಲಿನಲ್ಲಿ ನಿಗಧಿಪಡಿಸಿರುವ ಹಣ ಎಷ್ಟು?

ಆ) ಸರ್ಕಾರವು ರಾಜ್ಯಾಂದ್ಯಂತ ವ್ಯಾಪಿಸಿರುವ ದನಕರುಗಳ ಕಾಲು ಜ್ವರ - ಬಾಯಿ ಜ್ವರ ರೋಗ ತಡೆಗಟ್ಟಲು ಕ್ರಮಗಳೇನ್ನಾದರೂ ಕೈಗೊಳ್ಳಲಾಗಿದೆಯೇ?

ಇ) ಹಾಗಿದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಭೀಕರವಾಗಿ ಹಬ್ಬಿರುವ ಈ ರೋಗ ತಡೆಗಟ್ಟಲು ಸರ್ಕಾರವು ಎಷ್ಟು ಹಣ ಬಿಡುಗಡೆ ಮಾಡಿದೆ?

ಈ) ಸರ್ಕಾರವು ಹೊಸದುರ್ಗ ತಾಲ್ಲೂಕಿನಲ್ಲಿ ಸದರಿರೋಗ ತಡೆಗಟ್ಟಲು ಶಾಶ್ವತ ಯೋಜನೆಯನ್ನು ರೂಪಿಸುವ ಉದ್ದೇಶವಿದೆಯೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು):

ಅ) ರೂ. 250.00 ಲಕ್ಷಗಳು.

ಆ) ಈ ರೋಗವನ್ನು ತಡೆಗಟ್ಟಲು ಸಾಕಷ್ಟು ವ್ಯವಸ್ತೆ ಕೈಗೊಳ್ಳಲಾಗಿದೆ.

ಇ) ಕಾಲು ಮತ್ತು ಬಾಯಿ ರೋಗದ ಲಸಿಕೆಗಳನ್ನು ರೈತರು ಕೊಳ್ಳುವುದರಿಂದ ಸರ್ಕಾರದ ವತಿಯಿಂದ ಯಾವುದೇ ಖರ್ಚಿಸುವುದಿಲ್ಲ.

ಈ) ಸಧ್ಯಕ್ಕೆ ಇಲ್ಲ.

ಗ್ರಾಮೀಣಾಭಿವೃದ್ಧಿಯಲ್ಲಿ ಧನ ಸಹಾಯ ಪಡೆದ ಕುಟುಂಬಗಳ ಸಂಖ್ಯೆ

1523 – ಶ್ರೀ ರಾಜುಗೌಡ (ಹನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇದುವರೆವಿಗೆ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಡಿಯಲ್ಲಿ ಧನಸಹಾಯ ಪಡೆದಿರುವ ಕುಟುಂಬಗಳೆಷ್ಟು (ಜಿಲ್ಲಾವಾರು ಮಾಹಿತಿ ಒದಗಿಸಿ)

ಆ) ಇದರಿಂದ ಅವರು ಬಡತನ ರೇಖೆ ದಾಟಿದ್ದಾರೆಯೆ

ಇ) ಇವರುಗಳ ಜೀವನಮಟ್ಟ ಸುಧಾರಿಸಲು ಇನ್ನು ಯಾವ ಯಾವ ಯೋಜನೆಯಗಳನ್ನು ರೂಪಿಸಲಾಗುವುದು.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಅನುಬಂಧದಲ್ಲಿ ಒದಗಿಸಿದೆ.

ಆ) ಭಾರತ ಸರ್ಕಾರದ ವತಿಯಿಂದ ಜನವರಿ 1989 - ಸೆಪ್ಟಂಬರ್ 19889ರ ಅವಧಿಯಲ್ಲಿ ನಡೆಸಲಾದ ಮೌಲ್ಯ ಮಾಪನದ ಪ್ರಕಾರ ಶೇಕಡ 50ರಷ್ಟು ಕುಟುಂಬಗಳು ರೂ. 3500 ಗಳ ಬಡತನ ರೇಖೆಯನ್ನು ಮತ್ತು ಶೇಕಡ 6 ರಷ್ಟು ಕುಟುಂಬಗಳು ರೂ. 6400ಗಳ ಬಡತನ ರೇಖೆಯನ್ನು ದಾಟಿರುತ್ತಾರೆ.

ಇ) ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯನ್ನು ಮುಂದುವರಿಸಲಾಗುವುದು. ಇದಲ್ಲದೆ ಬಡತನ ರೇಖೆಯ ಕೆಳಗಿರುವ ಗ್ರಾಮೀಣ ತಾಯಂದಿರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ಸಹಾಯ ಪಡೆದ ಕುಟುಂಬಗಳ ಜಿಲ್ಲಾವಾರು ಮಾಹಿತಿ.

ಕ್ರ ಸಂ.	ಜಿಲ್ಲೆ	ಸಹಾಯ ಪಡೆದ ಕುಟುಂಬಗಳ ಸಂಖ್ಯೆ
1	2	3
1.	ಬೆಂಗಳೂರು (ನ)	8200
2.	ಬೆಂಗಳೂರು (ಗ್ರಾ)	89516
3.	ಚಿತ್ರದುರ್ಗ	66817
4.	ಕೋಲಾರ	89324